ನಿಯಮಿತವಾದ ಆದಾಯ, ಮತ್ತು ಸಂಘಟಿತ ಕ್ಷೇತ್ರದಲ್ಲೊಂದು ಸ್ಥಾಯಿ ನೌಕರಿಯೂ ಮುಖ್ಯ. ಅಂಬೇಡ್ಕರ್ ತಂದೆ ರಾಮ್‌ಜಿ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದುದರಿಂದ ಆ ಸವಲತ್ತೂ ಇತ್ತು. ಈ ವಿಷಯವನ್ನು ವಿಸ್ತಾರವಾಗಿ ವೈ.ಬಿ. ಸತ್ಯನಾರಾಯಣ ತಮ್ಮ ಪುಸ್ತಕ 'ಮೈ ಫಾದರ್ ಬಾಲಯ್ಯ' ಎನ್ನುವ ಪುಸ್ತಕದಲ್ಲಿ ದಾಖಲಿಸುತ್ತಾರೆ. ಒಂದು ದಲಿತ ಪರಿವಾರ ಆತ್ಮವಿಶ್ವಾಸದೊಂದಿಗೆ ಮುಖ್ಯಧಾರೆಗೆ ಬರಬೇಕಾದರೆ ಕನಿಷ್ಠ ಎರಡು ತಲೆಮಾರುಗಳಾದರೂ ಬೇಕಾಗಬಹುದೇನೋ. ಅಲ್ಲಿಯೂ, ಪರಿವಾರಕ್ಕೆ ನಿಯಮಿತವಾದ ಆದಾಯ ಮತ್ತು ಸಂಘಟಿತ ಕ್ಷೇತ್ರದ ನೌಕರಿಯಿದ್ದರೆ ಈ ಪ್ರಕ್ರಿಯೆ ತುಸು ಸರಳವಾಗಬಹುದು. ಸತ್ಯನಾರಾಯಣ ಅವರ ತಂದೆ ಬಾಲಯ್ಯ ರೈಲ್ವೆಯಲ್ಲಿ ಕೆಲಸ ಮಾಡುತ್ತಿದ್ದು, ರೈಲ್ವೆ ಕಾಲನಿಯಲ್ಲಿ ವಾಸ್ತವ್ಯವಿದ್ದದ್ದರಿಂದ ಜಾತಿ ಆಧಾರಿತ ಭೇದಭಾವ ಅಷ್ಟು ಪ್ರಖರವಾಗಿರಲಿಲ್ಲ ಎಂದು ಹೇಳುತ್ತಾರೆ. ಇಂಗ್ಲಿಷ್ ಮತ್ತು ವಿದೇಶಿ ವಿದ್ಯೆಯೂ ಇದಕ್ಕೆ ಒಂದು ಪರಿಹಾರ. ಹಿಂದುಳಿದ ಜನಾಂಗದವರ ಪ್ರಖರ ಚಿಂತಕ ಕಂಚ ಅಯಿಲಯ್ಯ ಯಾವಾಗಲೂ ಇಂಗ್ಲಿಷ್ ಮಾಧ್ಯಮದ ವಿದ್ಯೆಯ ಬಗ್ಗೆ ಮಾತನಾಡುತ್ತಿರುವ ತರ್ಕವನ್ನು ನಾವು ಗಮನಿಸಬೇಕು. ಭಾಷೆ, ವೇಷಭೂಷಣ, ವಿದ್ಯೆಯಿಂದ ಜಾತಿಯನ್ನು ಮೀರುವುದಕ್ಕೆ ಸ್ವಲ್ಪಮಟ್ಟಿಗೆ ಸಾಧ್ಯ.

ನಮ್ಮ ಸಂದರ್ಭದಿಂದ ಬೇರೊಂದು ಸಂದರ್ಭಕ್ಕೆ ವರ್ಗಾಂತರವಾದಾಗ ಜಾತಿ ಆಧಾರಿತ ಅಸ್ಪೃಶ್ಯತೆ ಮತ್ತು ಭೇದಭಾವ ಗೌಣವಾಗುತ್ತದೆ. "ಯಾರಾದರೂ ಯೂರೋಪಿಗೆ ಸಂದವರನ್ನು 'ನೀನ್ಯಾರೆಂದು?' ಕೇಳಿದರೆ ಆತ 'ನಾನು ಆಂಗ್ಲ; ನಾನು ಜರ್ಮನ್; ನಾನು ಫ್ರೆಂಚ್; ಅಥವಾ ನಾನು ಇಟಾಲಿಯನ್' ಎಂದು ಹೇಳಿದರೆ ಸಾಕಾಗುತ್ತದೆ. ಆದರೆ ಹಿಂದೂಗಳ ಮಾತಿಗೆ ಅದು ಸಾಕಾಗುವುದಿಲ್ಲ. ಅಲ್ಲಿಂದ ಮುಂದಕ್ಕೆ ಜಾತಿಯ ಮಾತನ್ನು ಆಡುವುದಲ್ಲದೇ, ಅಸಮಾನತೆಯನ್ನು ಪ್ರತಿ ಹೆಜ್ಜೆಯಲ್ಲೂ ಜಗಜ್ಜಾಹೀರುಗೊಳಿಸಬೇಕು" ಎಂದು ಅಂಬೇಡ್ಕರ್ ಹೇಳುತ್ತಾರೆ. ಅಷ್ಟೇ ಅಲ್ಲ, ಇಷ್ಟೆಲ್ಲ ಸಾಧನೆಯಾದ ಮೇಲೂ ಅಂಬೇಡ್ಕರ್ ಅಸ್ಪೃಶ್ಯತೆ ಮತ್ತು ಭೇದಭಾವವನ್ನು ಎದುರಿಸಬೇಕಾಯಿತು. 1928ರಲ್ಲಿ ಮುಂಬಯಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾಗ ದಮನಿತ ವರ್ಗ ಮತ್ತು ಆದಿವಾಸಿಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಏರ್ಪಡಿಸಿದ ಸಮಿತಿಯೊಂದರ ಸದಸ್ಯರಾಗಿ ಅಂಬೇಡ್ಕರ್ ನೇಮಕಗೊಳ್ಳುತ್ತಾರೆ. ಈ ಸಮಿತಿಯ ಕೆಲಸದ ಭಾಗವಾಗಿ 1930ರಲ್ಲಿ ಖಂದೇಶ್ ಪ್ರಾಂತದಲ್ಲಿ ಪರ್ಯಟನೆ ಮಾಡುವಾಗ, ಇವರ ಅಸ್ಪೃಶ್ಯ ಜಾತಿಯ ಕಾರಣವಾಗಿಯೇ ಚಾಲೀಸ್‌ಗಾಂವ್ ರೈಲು ನಿಲ್ದಾಣದಿಂದ ಸಮೀಪದ ಮಹಾರ್‌ವಾಡಾಗೆ ಕರೆದೊಯ್ಯಲು ಯಾವುದೇ ಟಾಂಗಾ ಚಾಲಕ ತಯಾರಿರುವುದಿಲ್ಲ. ಈ ರೀತಿಯ ಆಭಾಸಗಳನ್ನೂ ಗೋಪಾಲ್ ದಾಖಲಿಸುತ್ತಾರೆ.

ಹೀಗಾಗಿಯೇ ಅಂಬೇಡ್ಕರ್ ಅವರ ಉನ್ನತ ವ್ಯಾಸಂಗ ವಿದೇಶದಲ್ಲಿ ಆದದ್ದರಲ್ಲಿ ಹೆಚ್ಚು ಆಶ್ಚರ್ಯವಾಗಬಾರದು. ವಿದೇಶಗಳಲ್ಲಿಯೂ ಭೇದಭಾವವಿದೆ – ಅದು ವರ್ಣಾಧಾರಿತ ಭೇದಭಾವ – ಅದು ಜಾತಿಗಿಂತ ಭಿನ್ನವಲ್ಲ ಎಂದು ಇಸಾಬೆಲ್ ವಿಲ್ಕರ್ಸನ್ ತಮ್ಮ 'ಕಾಸ್ಟ್' ಎನ್ನುವ ಪುಸ್ತಕದಲ್ಲಿ ಮಂಡಿಸುತ್ತಾರೆ. ಇಲ್ಲಿ ಬಹುಶಃ ತಕ್ಷಣದ ಸಾಮಾಜಿಕ ಸಂದರ್ಭದಿಂದ ಹೊರಹೋದರೆ, ಒಂದು ದೂರವನ್ನು ಏರ್ಪಡಿಸಿದರೆ ಅದರಿಂದ ಅವಕಾಶಗಳು ಉಂಟಾಗಬಹುದೇನೋ. ಆದರೆ ಅದು ಒಬ್ಬರ ಸಮಸ್ಯೆಯ ಪರಿಹಾರ ಮಾತ್ರವಾಗುತ್ತದೆ. ಇಡೀ ಸಮುದಾಯದ ಪರಿಹಾರವಾಗಬೇಕಾದರೆ ಸ್ಥಳೀಯ ವ್ಯವಸ್ಥೆಯಲ್ಲಿಯೇ ಆಮೂಲಾಗ್ರ ಬದಲಾವಣೆಯಾಗಬೇಕು. ಹೀಗಾಗಿಯೇ ಅಂಬೇಡ್ಕರ್ ತಮ್ಮನ್ನು ಭಿನ್ನವಾಗಿ ಕಂಡುಕೊಳ್ಳುತ್ತಲೇ, ಸಂದರ್ಭದ ಆಮೂಲಾಗ್ರ ಪರಿವರ್ತನೆಗಾಗಿ ವಾದಿಸುತ್ತಿದ್ದರು.

ಅಂಬೇಡ್ಕರ್ ಅವರಿಗೆ ಸಿಕ್ಕ ಮತ್ತೊಂದು ಸವಲತ್ತು ಸುಲಭವಾಗಿ ಸಿಗುವ ಸವಲತ್ತಲ್ಲ. ಅವರ ವಿದ್ಯೆಗಾಗಿ ಬರೋಡಾದ ಮಹಾರಾಜ ಸಯ್ಯಾಜಿ ಗಾಯಕ್ವಾಡ್ ಆರ್ಥಿಕ ಸಹಾಯವನ್ನು ಮಾಡುತ್ತಾರೆ. ಆ ಆರ್ಥಿಕ ಸಹಾಯ ಸರಳವಾಗಿ ಕೈಗೂಡದಿದ್ದರೂ, ಅದು ಅವರ ಅವಶ್ಯಕತೆಗೆ ತಕ್ಕ ಮಟ್ಟದಲ್ಲಿ ಇಲ್ಲದಿದ್ದರೂ, ವಿದೇಶದಲ್ಲಿ ವಿದ್ಯೆಯನ್ನಾರ್ಜಿಸಲು ಯೋಚಿಸುವಷ್ಟರ ಮಟ್ಟಿಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ.

ಈ ಹಿನ್ನೆಲೆಯಲ್ಲಿ– ಇಷ್ಟು ಕಾರ್ಪಣ್ಯಗಳ ನಡುವಿನ ಸಾಧನೆಯ ಸಂದರ್ಭದಲ್ಲಿ– ಅಂಬೇಡ್ಕರ್ ಅವರ ವಿಚಾರಧಾರೆ ಬೆಳೆದುಬಂದ ರೀತಿಯನ್ನು ಗ್ರಹಿಸಬೇಕಾಗುತ್ತದೆ.

ಅಂಬೇಡ್ಕರ್ ಅವರ ಜೀವನದಲ್ಲಿ ವಿದ್ಯೆ,